(SRI KADIDAL MANJAPPA.)

(2) Manne to Baragur.

(3) Dobspet to Siddarebetta.

(4) Kunigal to Honnasandra.

(5) Kuntabommanahalli to Yelakyathanahalli.

(6) Nakanakuppe to join Bangalore-Tyamagondlu Road.

(7) Manne to Kannahalli.

(*b*) Sl. Nos. 2, 5, 6 and 7 of the Roads have been recommended by the District Board to the Commissioner for Local Self-Government for sanctioning Government Grant so as to take possession and maintain them.

ಶ್ರೀ ಡಿ. ಎಂ. ಗೋವಿಂದರಾಜು.—ಈ ರಸ್ತೆಗಳಾಗಿ ಎಷ್ಟು ವರ್ಷವಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಎರಡು ವರ್ಷ.

ಶ್ರೀ ಡಿ. ಎಂ. ಗೋವಿಂದರಾಜು.—ಎಷ್ಟೆಷ್ಟು ಮೈಲಿ ಇವೆ ?

Sri Kadidal MANJAPPA.—I am sorry that the mileage figure is not with me.

ಶ್ರೀ ಡಿ. ಎಂ. ಗೋವಿಂದರಾಜು.—ಈ ಪಟ್ಟಿಯಲ್ಲಿರುವ 2, 5, 6 ಮತ್ತು 7ನೆಯ ರಸ್ತೆಗಳನ್ನು ಡಿಸ್ಟ್ರಿಕ್ಟ್ ಬೋರ್ಡ್ ವಹಿಸಿಕೊಳ್ಳುವುದಕ್ಕೆ ಸ್ಥಳೀಯ ಪ್ರಜಾಧಿಕಾರ ಸಂಸ್ಥೆಗಳ ಕಮಿಷನರಿಗೆ ಶಿಫಾರಸು ಬಂದಿದೆ ಎಂದು ಹೇಳಲಾಗಿದೆ, ಎಷ್ಟು ದಿವಸವಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಡಿ. ಎಂ. ಗೋವಿಂದರಾಜು.—ಅವರು ಶಿಫಾರಸು ಮಾಡಿರುವಂತೆ ಜಾಗ್ರತೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಪರಿಶೀಲನೆ ಮಾಡಬೇಕು. ಜಿಲ್ಲಾಧಿಕಾರಿಗಳೂ ಪರಿಶೀಲನೆ ಮಾಡಬೇಕಾಗುತ್ತದೆ. ನಿರ್ದಿಷ್ಟವಾಗಿ ಯಾವಾಗ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ಈಗ ಶಿಪಾರ್ಸು ಮಾಡಿರುವುದನ್ನು ಜಾಗ್ರತೆ ತೆಗೆದುಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ವಿಚಾರ ಮಾಡಬೇಕು. ಜಿಲ್ಲಾಧಿಕಾರಿಗಳು ಈ ವಿಚಾರವನ್ನು ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಡೆಪ್ಯುಟಿ ಕಮಿಷನರ್ ಸ್ಥಳೀಯ ಸಂಸ್ಥೆಯ ಕಮಿಷರಿಗೆ ಕಳುಹಿಸಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಕಮಿಷನರಿಂದ ಉತ್ತರ ಬಂದಮೇಲೆ ಆ ವಿಚಾರವನ್ನು ಯೋಚನೆ ಮಾಡುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು.—ಒಂದು ವರ್ಷ ವಾದರೂ ಇನ್ನೂ ವಾರದೆ ಇರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡೋಣ.

Roads and Culverts (Construction in Malnad District).

Q.—354. **Sri G. A. THIMMAPPA GOWDA** (Arkalgud).—

Will the Government be pleased to state :—

(*a*) whether it is a fact that the Central Government have given a grant of Rs. 50 lakhs for construction of roads, culverts, etc., in Malnad Districts ;

(*b*) if so, how this amount is distributed and on what items (the amount given may kindly be furnished districtwar) ?

A.—**Sri Kadidal MANJAPPA** (Minister for Revenue and Public Works).—

(*a*) No.

(*b*) Does not arise in view of the above reply.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮಲೆನಾಡು ರಸ್ತೆಗಳ ದುರಸ್ತು ಮಾಡುವುದು ಮತ್ತು culvert ಹಾಕುವುದಕ್ಕೋಸ್ಕರ ಮೈನೂರು ಸರ್ಕಾರದವರು ಏನಾದರೂ ಪ್ರತ್ಯೇಕವಾಗಿ ಹಣವನ್ನು ಒದಗಿಸಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಲೆನಾಡು ಪ್ರಾಂತ್ಯಗಳಲ್ಲಿ ಸಂಚಾರ ಸೌಕರ್ಯಗಳನ್ನು ಉತ್ತಮಪಡಿಸುವುದಕ್ಕೋಸ್ಕರ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿರುವಂತೆ ಸುಮಾರು 7 ಲಕ್ಷಕ್ಕೆ ಮೇಲ್ಪಟ್ಟು ಹಣವನ್ನು ಖರ್ಚು ಮಾಡಿದ್ದೇವೆ. ಈ ಸಾಲಿನ Budget ನಲ್ಲಿಯೂ ಇದಕ್ಕಾಗಿ ಒದಗಿಸಿದ್ದೇವೆ.

Mr. SPEAKER.—It refers to the Central Government Grant.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಗ್ರಾಂಟಿನಲ್ಲಿ ಯಾವ ಯಾವ ಜಿಲ್ಲೆಗೆ ಯಾವ ಯಾವ ರೀತಿ ಏಲೇಪಾರಿ ಮಾಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಅಂಕಿಅಂಶಗಳು ಈಗ ನನ್ನಲ್ಲಿ ಇಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಬಹು ಭಾಗದ ಹಣವನ್ನು ಕೆಲವು ರಸ್ತೆಗಳಲ್ಲಿ concrete ಹಾಕಿಸುವುದಕ್ಕೆ ಖರ್ಚು ಮಾಡುತ್ತಿದ್ದೀರಿ ಎಂಬುದು ನಿಜವೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಲೆನಾಡು development grant ನಿಂದ concrete ಮಾಡುವುದಕ್ಕೋಸ್ಕರ 3 ಕಾನನ್ನೂ ಉಪಯೋಗಿಸುತ್ತಾ ಇಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಕಡೂರು ಡಿಸ್ಟ್ರಿಕ್ಟಿನಲ್ಲಿ ರಸ್ತೆಗಳನ್ನು concrete ಮಾಡಿಸಲು ಹಣವನ್ನು ಹೆಚ್ಚು ಮಾಡಿರುವುದು ನಿಜವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು "50 ಸಿವಿಲ್ ವರ್ಕ್ಸ್"ನಿಂದ ಖರ್ಚುಮಾಡಿರತಕ್ಕ ಹಣ.